ಗದಗ್ ಪಟ್ಟಣದಲ್ಲಿ ಮನೆಗಳ ಕೊರತೆ

೨೪೭. ಶ್ರೀ ಕೆ. ಹೆಚ್. ಪಾಟೀಲ್ (ಗದಗ್).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗದಗ್ ಪಟ್ಟಣದಲ್ಲಿ ವಾಸಿಸುವ ಮನೆಗಳ ಕೊರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಹಾಗಿದ್ದಲ್ಲಿ ಸರ್ಕಾರವು ರಾಜ್ಯದ ಗೃಹ ಮಂಡಳಿಯ ಮೂಲಕ ಗೃಹಗಳನ್ನು ನಿರ್ಮಾಣ ಮಾಡಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ರಾಜ್ಯ ಸಚಿವರು).—

ಅ) ಹೌದು.

ಆ) ಕರ್ನಾಟಕ ಗೃಹ ಮಂಡಳಿಯು ೧೯೮೦ನೇ ಸಾಲಿನಲ್ಲಿ ಗದಗ್ ಪಟ್ಟಣದಲ್ಲಿ ವಸತಿಗಳ ಕೊರತೆಯನ್ನು ತಿಳಿಯಲು ಒಂದು ಯೋಜನೆಯನ್ನು ಮಾಡಿತು. ಒಟ್ಟಾರೆ ಆರ್ಥಿಕ ಹಿಂದುಳಿದ ವರ್ಗದ ಯೋಜನೆಗೆ ೩೧೧ ಅರ್ಜಿಗಳಿದ್ದು ಕಡಿಮೆ ಆದಾಯ ವರ್ಗದ ಯೋಜನೆಗೆ ೩೨೨ ಅರ್ಜಿಗಳು ಮಧ್ಯಮ ಆದಾಯ ವರ್ಗ–೧ರ ಬಗ್ಗೆ ೫೨೯ ಅರ್ಜಿಗಳು ಮಧ್ಯಮ ಆದಾಯ ವರ್ಗ–೧೨ರ ಬಗ್ಗೆ ೧೫೦ ಅರ್ಜಿಗಳು ಪರಾಮರ್ಶೆಗೆ ಬಂದಿದ್ದವು. ಸದರಿ ಯೋಜನೆ ಬಗ್ಗೆ ಭೂಲಭ್ಯವನ್ನು ಗಮನದಲ್ಲಿಟ್ಟು ೧೮೧೦ ಮನೆಗಳನ್ನು ಕಟ್ಟಿಸಿ, ಗೃಹ ಹಂಚಿಕೆ ನಿಯಮಾವಳಿಯ ಮೇರೆಗೆ ಅರ್ಹತೆಯುಳ್ಳ ಅರ್ಜಿದಾರರಿಗೆ ಮಂಜೂರು ಮಾಡಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ರಘುಪತಿ (ಮಾನ್ಯ ವಿಧಾನಪರಿಷತ್ತು ಬಂದರು ಸಚಿವರು).— ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಅವರ ಹೆಸರಿನ ಮುಂದೆ ನಮೂದಿಸಿರುವ

"ಭಾರತ ಸಂವಿಧಾನದ ೨೫೪(೨)ನೇ ಪರಿಚ್ಛೇದದ ಮೇರೆಗೆ ಭಾರತದ ನಿಯಂತ್ರಣ ಹಾಗೂ ಮಹಾ ಲೇಖಾಪಾಲಕರವರ ಕರ್ನಾಟಕ ಸರ್ಕಾರದ ೧೯೮೫–೮೬ನೇ ಸಾಲಿನ ರಾಜಸ್ವ ಆದಾಯದ ಹಾಗೂ ವಾಣಿಜ್ಯಕ್ಕೆ ಸಂಬಂಧಿಸಿದ ವರದಿಗಳನ್ನು ಸಭೆಯ ಮುಂದಿಡುತ್ತೇನೆ."

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು). — ನಾನು

೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಶಾಸನದ ೬೬ (೨)ನೇ ಕಲಮಿನ ಮೇರೆಗೆ. —

೧) ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳ ಕಛೇರಿಗಳು ಉಪಯೋಗಿಸುವ ವಾಹನಗಳಿಗೆ ತೆರಿಗೆಯಿಂದ ವಿನಾಯಿತಿ ನೀಡುವ ಬಗ್ಗೆ ದಿನಾಂಕ ೧೪ನೇ ಆಕ್ಟೋಬರ್ ೧೯೮೭ ರಂದು ಹೊರಡಿಸಲಾಗಿರುವ ಎಫ್. ಟಿ. ಡಿ. ೧೨೦ ಡಿ. ಎಂ. ಟಿ. ೮೭ರ ಕ್ರಮಾಂಕದ ಅಧಿಸೂಚನೆಯನ್ನು,

೨) ಹಲವು ವರ್ಗಗಳಿಗೆ ಸಂಬಂಧಿಸಿದ ಮೋಟಾರು ವಾಹನಗಳ ತೆರಿಗೆಯನ್ನು ಕಡಿಮೆ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೩೦ನೇ ಡಿಸೆಂಬರ್ ೧೯೮೭ ರಂದು ಹೊರಡಿಸಲಾದ ಎಫ್‌ಡಿ ೨೮೫ ಡಿವಿಂಟಿ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು, ಹಾಗೂ

೩) ಹಲವು ವರ್ಗಗಳಿಗೆ ಸಂಬಂಧಿಸಿದ ವಾಹನಗಳ ತೆರಿಗೆಯನ್ನು ಕಡಿಮೆಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೭ನೇ ಆಕ್ಟೋಬರ್ ೧೯೮೭ ರಂದು ಹೊರಡಿಸಲಾದ ಎಫ್‌ಟಿಡಿ ೩೩೫ ಡಿವಿಂಟಿ ೮೪ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು. — ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.